<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 7/2019**

| | | |
|---|---|---|
| ಸಾಕ್ಷಿಯ ಹೆಸರುಃ | ಅಭಿಷೇಕ್ | ಫ್ರಾಸಾಃಃ 1 |
| ತಂದೆಯ ಹೆಸರುಃ | ಪ್ರಕಾಶ | ಚಾಸಾಃಃ 4 |
| ವಯಸ್ಸುಃ | 32 ವರ್ಷ | ಪ್ರಮಾಣೀಕರಿಸಿದ<br>ದಿಃ 12.02.2026 |
| ಉದ್ಯೋಗಃ | ವ್ಯಾಯಾಪಾರ | |
| ವಾಸ ಸ್ಥಳಃ | ಪಿರಿಯಾಪಟ್ಟಣ | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ಮೃತ ತಾಯಮ್ಮ ನನ್ನ ಅಜ್ಜಿ

2. ದಿಃ 05.02.2018 ರಂದು ಸಂಜೆ 7-10 ಗಂಟೆ ಸಮಯದಲ್ಲಿ ನಾನು ಸಂತೆಮಾಳದಲ್ಲಿ ವ್ಯಾಪಾರ ಮುಗಿಸಿಕೊಂಡು ವಾಪಸ್ ಬೆಟ್ಟದಪುರ ಸರ್ಕಲ್ ಬಳಿ ಬರುತ್ತಿರುವಾಗ ನನಗೆ ಯಾರೋ ಪೋನ್ ಮಾಡಿ ಗೋಣಿಕೊಪ್ಪ ರಸ್ತೆ ಸರ್ಕಲ್ ನಿಂದ ಸ್ವಲ್ಪ ಮುಂದೆ ನನ್ನ ಅಜ್ಜಿಗೆ ಅಪಘಾತವಾಗಿರುವುದಾಗಿ ತಿಳಿಸಿದರು. ನಾನು ತಕ್ಷಣ ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ಅವರ ತಲೆಯ ಹಿಂಭಾಗ, ಮುಂಭಾಗ ಹಾಗೂ ಮೂಗಿನಲ್ಲಿ ರಕ್ತಸ್ರಾವವಾಗಿತ್ತು.

3. ನಂತರ ಸ್ಥಳದಲ್ಲಿ ಹರೀಶ ಹಾಗೂ ಮಂಜು ರವರು ನನ್ನ ಅಜ್ಜಿ ಪುಷ್ಪ ಕಾನ್ವೆಂಟ್ ಬಳಿ ಇರುವ ಮನೆಗೆ ಬರುತ್ತಿದ್ದಾಗ, ಹಿಂಬದಿಯಿಂದ ಒಂದು ಆಟೋ ಬಂದು ಡಿಕ್ಕಿಪಡಿಸಿದ್ದಾಗಿ ತಿಳಿಸಿದರು. ಆಟೋಪಿ ಚಾಲಕ ಬೆಟ್ಟದಪುರದಿಂದ ಗೋಣಿಕೊಪ್ಪಕ್ಕೆ ಅತೀವೇಗವಾಗಿ ಹಾಗೂ ಅಜಾಗರೂಕತೆಯಿಂದ ಬಂದು ಡಿಕ್ಕಿಪಡಿಸಿರುತ್ತಾನೆ ಎಂದು ತಿಳಿಸಿದರು. ಚಾಲಕ ಕೂಡಲೇ ಸ್ಥಳದಿಂದ ಓಡಿ ಹೋಗಿದ್ದಾಗಿ ತಿಳಿಸಿದರು.

4. ಅಲ್ಲಿ ಇದ್ದ ವೈದ್ಯ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ಹೋಗುವಂತೆ ತಿಳಿಸಿದರು. ನಮ್ಮ ಅಜ್ಜಿಯನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋಗಿ 2 ನಿಮಿಷ ಆಗುತ್ತಿದ್ದಂತೆ ಮೃತರಾಗಿರುತ್ತಾರೆ. ಅಪಘಾತ ಮಾಡಿದ ವ್ಯಕ್ತಿ ಹೆಸರು ರಾಮ ಎಂದು ಗೊತ್ತಾಗಿರುತ್ತದೆ. ಆಟೋ ನಂಬರ್ ನನಗೆ ನೆನಪಿಲ್ಲ.

5. ಸದರಿ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಪೊಲೀಸರು ಶವ ತನಿಖೆ ಮಾಡುವಾಗ ನನ್ನ ಸಹಿ ಪಡೆದಿರುತ್ತಾರೆ.

6. ಸಾಕ್ಷಿ ಶವತನಿಖಾ ವರದಿಯಲ್ಲಿನ ತಮ್ಮ ಸಹಿ ನೋಡಿ ಗುರುತಿಸಿದ್ದು, ಶವ ತನಿಖಾ ವರದಿಯನ್ನು ನಿಪಿ - 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 1(ಎ) ಎಂದು ಗುರುತಿಸಲಾಯಿತು.

7. ಆರೋಪಿಯನ್ನು ನೋಡಿದರೆ ಗುರುತಿಸುವುದಾಗಿ ನುಡಿಯುತ್ತಾರೆ. (ಆರೋಪಿ ಈ ದಿನ ಗೈರು ಹಾಜರಿದ್ದು, ಗುರುತಿನ ಬಗ್ಗೆ ತಕರಾರು ಇರುವುದಿಲ್ಲ ಎಂದು ಆತನ ಪರ ವಕೀಲರು ನುಡಿಯುತ್ತಾರೆ)

<u>ಪಾಟೀ ಸವಾಲು ಆರೋಪಿತರ ವಕೀಲರಿಂದಃ</u>

1. ಆರೋಪಿಯನ್ನು ಆರೋಪಿತ ಅಪಘಾತವಾಗುವ ಮುಂಚೆ ಸಹ ನೋಡಿದ್ದೆ. ಅವರು ನನಗೆ ಪರಿಚಯ ಇಲ್ಲ.
2. ನೀವು ಅಪಘಾತವನ್ನು ಕಣ್ಣಾರೆ ನೋಡಿಲ್ಲದ ಕಾರಣ ಯಾರ ತಪ್ಪಿನಿಂದ ಅಪಘಾತವಾಯಿತು ಎಂದು ಹೇಳಲು ಆಗುವುದಿಲ್ಲ ಎಂದರೆ ಸರಿ.
3. ಮೃತ ತಾಯಮ್ಮ ಅಜ್ಜಿ ಆದ ಕಾರಣ ನಿಮಗೆ ಅಪಘಾತ ಪರಿಹಾರದ ಹಣ ಪಡೆಯಲು ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.
4. ಆರೋಪಿ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.
5. ಆರೋಪಿಗೆ ತೊಂದರೆಯಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

<u>ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು</u>
<u>ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.</u>

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ